ಓ.ಎಸ್.204/2023
ಪಿ.ಡಬ್ಲ್ಯು 02

ದಿನಾಂಕ: 06-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಾದ ಶ್ರೀ. ಬಿ ಟಿ ಬಿ .ರವರಿಂದಃ-</u>**

ಈ ದಾವೆ ಯಾಕೆ ಮಾಡಿದ್ದಾರೆ ನನಗೆ ಗೊತ್ತು . ಈ ದಾವೆಯನ್ನು ಹೊಲ ಬೇಕು ಅಂತಾ ಹಾಕಿದ್ದಾರೆ ನನಗೆ ಏದಲು ಬರೆಯಲು ಬರುವುದಿಲ್ಲಾ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲಾ. ವಾದಿ ಮತ್ತು ಪ್ರತಿವಾದಿಯರಿಗೆ 4 ಜಮೀನುಗಳು ಇವೆ, ನನಗೆ ಒಂದೇ ಸರ್ವೆ ನಂಬರ ಗೊತ್ತು ಉಳಿದಿದ್ದು ಗೊತ್ತಿಲ್ಲಾ. ಈ ದಾವೆ ಸರ್ವೆ ನಂ 115 ರ ಮೇಲೆ ಮಾಡಿದ್ದಾರೆ. ದಾವಾ ಆಸ್ತಿ ವಾದಿಯರು ಖರೀದಿ ಮಾಡಿದ್ದಾರೆ. ಒಂದು ಹೆಣ್ಣು ಮಗಳಿಂದ ಖರೀದಿ ಮಾಡಿದ್ದಾರೆ ಅವರ ಹೆಸರು ಗೊತ್ತಿಲ್ಲಾ. ಯಾವಾಗ ಖರೀದಿ ಮಾಡಿದ್ದಾರೆ ಗೊತ್ತಿಲ್ಲಾ. ವಾದಿ ಮತ್ತು ಪ್ರತಿವಾದಿಯರಿಗೆ ಕೇವಲ ಎರಡೇ ಜಮೀನು ಇದ್ದು ಅದು ಸರ್ವೆ ನಂ 115 ಮತ್ತು 127 ಹಿಸ್ಸಾ 2 ಎಂದರೆ ಸರಿ. ಈ ಎರಡು ಜಮೀನುಗಳನ್ನು ವಾದಿಯರ ತಂದೆ ಮತ್ತು ಪ್ರತಿವಾದಿ ಸೇರಿ ಖರೀದಿ ಮಾಡಿದ್ದಾರೆ ಎಂದರೆ ಸರಿ.ಸರ್ವೆ ನಂ 115 ರಲ್ಲಿ ಅಬ್ದುಲ್ ಖಾದರ್ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ರೆಹಮಾನ ಇವರು ಸರ್ವೆ ನಂ 115 ಉಳುಮೆ ಮಾಡುತ್ತಿದ್ದರು ಅಂತಾ ಹೇಳುತ್ತಾರೆ ಮತ್ತು ಸರ್ವೆ ನಂ 127 ನ್ನು ಅಬ್ದುಲ್ ಖಾದರ್ ಉಳುಮೆ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲಾ. ಸರ್ವೆ ನಂ 127 ವಾದಿಯರ ತಂದೆ ಮೃತ ಪಟ್ಟ ನಂತರ ಅದನ್ನು ವಾದಿ ತನ್ನ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ. ಎರಡು ಆಸ್ತಿಗಳನ್ನು ಖರೀದಿ ಮಾಡಿದ ನಂತರ ವಾದಿಯರ ತಂದೆ ಮತ್ತು ಪ್ರತಿವಾದಿ ಪರಸ್ಪರ ಒಪ್ಪಿಗೆಯ ಮೇರೆಗೆ ಆಸ್ತಿಗಳನ್ನು ಅದಲು ಬದಲು ಮಾಡಿಕೊಂಡು ಸರ್ವೆ ನಂ 127 ನ್ನು ವಾದಿಯರು ಮಾರಾಟ ಮಾಡಿಕೊಂಡು ಈಗ ಪ್ರತಿವಾದಿಯರ ಜಮೀನು ಸರ್ವೆ ನಂ 115 ತಮ್ಮದು ಅಂತಾ ಸುಳ್ಳು ದಾವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿಯರು ತಮಗೆ ಬಂದ ಜಮೀನನ್ನು ಮಾರಾಟ ಮಾಡಿದ್ದು ಈಗ ಪ್ರತಿವಾದಿಯರ ಜಮೀನು ಅಂದರೆ ದಾವಾ ಆಸ್ತಿ ನಮ್ಮದು ಅಂತಾ ಸುಳ್ಳು ದಾವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯರು ಗುಂಡಾ ವರ್ತಿ ಮಾಡಿ ವಾದಿಯರನ್ನು ದಾವಾ ಆಸ್ತಿಯಿಂದ ಓಡಿಸಲು ಪ್ರಯತ್ನ ಮಾಡುತ್ತಿದ್ದಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸರ್ವೆ ನಂ 115 ಹಿಸ್ಸಾ 2 4 ಎಕರೆ 24 ಗುಂಟೆ ಸಂಪೂರ್ಣವಾಗಿ ಪ್ರತಿವಾದಿಯರೇ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸುಳ್ಳು ನನಗೆ ಎಲ್ಲಾ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೇಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

Sd/-

**(ಉಂಡಿ ಮಂಜುಳಾ ಶಿವಪ್ಪ )**
ಹಿರಿಯ ಸಿವಿಲ್ ನ್ಯಾಯಾಧೀಶರು,
ಲಿಂಗಸೂಗುರು.

ಓ.ಎಸ್.204/2023
ಪಿ.ಡಬ್ಲ್ಯು 03

ದಿನಾಂಕ: 06-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಾದ ಶ್ರೀ. ಬಿ ಟಿ ಬಿ .ರವರಿಂದಃ-**

ಈ ದಾವೆ ಯಾಕೆ ಮಾಡಿದ್ದಾರೆ ನನಗೆ ಗೊತ್ತು . ಈ ದಾವೆಯನ್ನು ಹೊಲ ಬೇಕು ಅಂತಾ ಹಾಕಿದ್ದಾರೆ. ಈ ದಾವಾ ಆಸ್ತಿಯನ್ನು ವಾದಿಯ ತಂದೆ 15 ವರ್ಷದ ಹಿಂದೆ ಖರೀದಿ ಮಾಡಿದ್ದಾರೆ. ಅವರು ಎಷ್ಟು ಜಮೀನುಗಳನ್ನು ಖರೀದಿ ಮಾಡಿದ್ದಾರೆ ನನಗೆ ಗೊತ್ತಿಲ್ಲಾ. ದಾವಾ ಆಸ್ತಿ ಯಾರಿಂದಾ ಖರೀದಿ ಮಾಡಿದ್ದಾರೆ ಗೊತ್ತಿಲ್ಲಾ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲಾ. ವಾದಿಯರ ತಂದೆ ಮತ್ತು ಪ್ರತಿವಾದಿ ಎರಡು ಜಮೀನುಗಳನ್ನು ಖರೀದಿ ಮಾಡಿದ್ದರು ಎಂದರೆ ಸರಿ. ಆ ಎರಡು ಜಮೀನುಗಳು ಪೈಕಿ ಒಂದು ಸರ್ವೆ ನಂ 115 ಇನ್ನೊಂದು ಗೊತ್ತಿಲ್ಲಾ. ಸರ್ವೆ ನಂ 115 ಇದು ನಾಲ್ಕುವರೆ ಎಕರೆ ಇದೆ. ಅಮ್ಮಜಾದ್ ಅವರು ಮಾರಾಟ ಮಾಡಿದ ಜಮೀನು ಯಾವುದು ಅವರಿಗೆ ಹೇಗೆ ಬಂದಿತ್ತು ನನಗೆ ಗೊತ್ತಿಲ್ಲಾ. ವಾದಿಯರ ತಂದೆ ಮತ್ತು ಪ್ರತಿವಾದಿ ಎರಡು ಜಮೀನುಗಳನ್ನು ಖರೀದಿ ಮಾಡಿದ್ದು ಸರ್ವೆ ನಂ 127 ನ್ನು ವಾದಿಯರ ತಂದೆ ಮೃತ ಪಟ್ಟ ನಂತರ ವಾದಿಯರು ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲಾ. ಸರ್ವೆ ನಂ 127 ಮಾರಾಟ ಮಾಡಿದ್ದು ಈಗ ಅವರಿಗೆ ಯಾವುದೇ ಜಮೀನು ಉಳಿದಿಲ್ಲಾ ಅದಕ್ಕೆ ಪ್ರತಿವಾದಿಯರಿಗೆ ತೊಂದರೆ ಕೊಡಲು ದಾವೆ ಮಾಡಿದ್ದಾರೆ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

Sd/-
**(ಉಂಡಿ ಮಂಜುಳಾ ಶಿವಪ್ಪ )**
ಹಿರಿಯ ಸಿವಿಲ್ ನ್ಯಾಯಾಧೀಶರು,
ಲಿಂಗಸೂಗುರು.